www.karunaduexams.com

# ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ (CDPO) 3

www.karunaduexams.com

1. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಭಾರತ ಸಂವಿಧಾನಕ್ಕೆ ರಾಜ್ಯ ನಿರ್ದೇಶಕ ತತ್ವಗಳನ್ನು ಐರ್ಲೆಂಡ್ ಸಂವಿಧಾನದಿಂದ ಎರವಲು ಪಡೆಯಲಾಗಿದೆ

II) ಭಾರತ ಸಂವಿಧಾನದ ಐದನೇ ಭಾಗವು ರಾಜ್ಯ ನಿರ್ದೇಶಕ ತತ್ವಗಳನ್ನು ಒಳಗೊಂಡಿದೆ

III) ರಾಜ್ಯ ನಿರ್ದೇಶಕ ತತ್ವಗಳು ನ್ಯಾಯರಕ್ಷಿತವಾದವುಗಳಲ್ಲ, ಆದರೆ ಆಡಳಿತಕ್ಕೆ ಮೂಲಭೂತ ನಿಯಮಗಳಾಗಿವೆ

ಮೇಲಿನ ಯಾವ ಹೇಳಿಕೆ ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) I, II & III

I & III

ಭಾರತ ಸಂವಿಧಾನದ ಮೂರನೇ ಭಾಗವು ರಾಜ್ಯ ನಿರ್ದೇಶಕ ತತ್ವಗಳನ್ನು ಒಳಗೊಂಡಿದೆ. ಸಂವಿಧಾನದ 36 ರಿಂದ 51 ರವರೆಗಿನ ವಿಧಿಗಳು ರಾಜ್ಯ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿವೆ.

2. ಸಾಮಾಜಿಕ ಅಭಿವೃದ್ಧಿ ಭಾರತದಲ್ಲಿ ಗಮನಾರ್ಹ ಪ್ರಗತಿಯನ್ನು ಕಾಣಲು ವಿಫಲವಾಗಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ _______?

ಅ) ಭ್ರಷ್ಟಚಾರ

ಆ) ಸಂಪನ್ಮೂಲಗಳ ಕೊರತೆ

ಇ) ಮಾನವ ಶಕ್ತಿ ಇಲ್ಲದಿರುವುದು

ಈ) ಫಲಾನುಭವಿಗಳಲ್ಲಿ ಇಚ್ಛಾಶಕ್ತಿ ಕೊರತೆ

ಭ್ರಷ್ಟಚಾರ

3. ವೈದ್ಯಕೀಯ ಗರ್ಭಪಾತ ಕಾಯಿದೆ (Medical Termination of Pregnancy Act) ಜಾರಿಗೆ ಬಂದ ವರ್ಷ ____________?

ಅ) 1956

ಆ) 1963

ಇ) 1971

ಈ) 1977

1971

www.karunaduexams.com

4. ಲಿಂಗ ಅನುಪಾತ (Sex Ration) ಎಂದರೆ __________?

ಅ) ಪುರುಷ ಮತ್ತು ಮಹಿಳೆಯರ ನಡುವಿನ ಸಂಬಂಧ

ಆ) ಒಟ್ಟು ಜನಸಂಖ್ಯೆಯಲ್ಲಿ ಪುರುಷ ಮತ್ತು ಮಹಿಳೆಯ ನಡುವಿನ ಅನುಪಾತ

ಇ) ಜನಸಂಖ್ಯೆಯಲ್ಲಿ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆ

ಈ) ಮೇಲಿನ ಯಾವುದು ಅಲ್ಲ

ಜನಸಂಖ್ಯೆಯಲ್ಲಿ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆ

5. ಭಾರತದಲ್ಲಿ ಭ್ರಷ್ಟಚಾರಕ್ಕೆ ಸಂಬಂಧಿಸಿದಂತೆ ರಚಿಸಲಾದ ಸಮಿತಿ ಯಾವುದು?

ಅ) ಕೃಷ್ಣ ಐಯರ್ ಸಮಿತಿ

ಆ) ಸಂತಾನಮ್ ಸಮಿತಿ

ಇ) ಮಳಿಮಠ ಸಮಿತಿ

ಈ) ಕೊಠಾರಿ ಸಮಿತಿ

ಸಂತಾನಮ್ ಸಮಿತಿ

ಭಾರತದಲ್ಲಿ ಭ್ರಷ್ಟಚಾರ ನಿಗ್ರಹಿಸುವ ಸಲುವಾಗಿ 1960 ರಲ್ಲಿ ಕೆ. ಸಂತನಮ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ತನ್ನ ವರದಿಯನ್ನು 1962 ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು.

6. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) 1971ರ ವೈದ್ಯಕೀಯ ಗರ್ಭಪಾತ ಕಾಯಿದೆ (ಎಂಟಿಪಿ ಕಾಯಿದೆ) ಪ್ರಕಾರ, ಗರ್ಭ ಧರಿಸಿದ 20 ವಾರಗಳ ನಂತರ ಗರ್ಭಪಾತವನ್ನು ನಿಷೇಧಿಸಲಾಗಿದೆ.

II) ಈ ಕಾಯಿದೆಗೆ 2002 ರಲ್ಲಿ ತಿದ್ದುಪಡಿ ತರಲಾಗಿದ್ದು, ತಾಯಿಯ ಆರೋಗ್ಯ ತೀವ್ರ ಅಪಾಯದಲ್ಲಿರುವಾಗ 20ನೇ ವಾರದ ನಂತರವೂ ವೈದ್ಯಕೀಯ ಶಿಫಾರಸ್ಸಿನ ಮೇರೆಗೆ ಗರ್ಭಪಾತ ಮಾಡಿಸಿಕೊಳ್ಳಬಹುದು

III) ಇತ್ತೀಚೆಗೆ ಸುಪ್ರೀಂ ಕೋರ್ಟ್ 24 ವಾರಗಳ ಗರ್ಭಿಣಿಗೆ ಗರ್ಭಪಾತ ಮಾಡಿಸಿಕೊಳ್ಳಲು ಅನುಮೋದನೆ ನೀಡಿದೆ

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) I, II & III

I, II & III

www.karunaduexams.com

7. ಮೊದಲ “ವಿಶ್ವ ಸಾಮಾಜಿಕ ಅಭಿವೃದ್ಧಿ ಶೃಂಗಸಭೆ (World Summit for Social Development)” ಯಾವ ವರ್ಷ ಹಾಗೂ ಎಲ್ಲಿ ನಡೆಯಿತು?

ಅ) 1985, ನವ ದೆಹಲಿ

ಆ) 1995, ಕೋಪನ್ ಹ್ಯಾಗನ್

ಇ) 2005, ನ್ಯೂ ಯಾರ್ಕ್

ಈ) 2001, ಲಂಡನ್

1995, ಕೋಪನ್ ಹ್ಯಾಗನ್

ಮೊದಲ ವಿಶ್ವ ಸಾಮಾಜಿಕ ಅಭಿವೃದ್ಧಿ ಶೃಂಗಸಭೆ 1995 ರಲ್ಲಿ ಕೋಪನ್ ಹ್ಯಾಗನ್ ನಲ್ಲಿ ನಡೆಯಿತು. ಇದು ಆ ಕಾಲ ವಿಶ್ವ ನಾಯಕರ ಅತಿದೊಡ್ಡ ಸಮಾವೇಶವೆನಿಸಿತ್ತು. ಶೃಂಗಸಭೆಯಲ್ಲಿ ಬಡತನ ನಿರ್ಮೂಲನೆ, ಉದ್ಯೋಗ ಸೃಜನೆ ಹಾಗೂ ಸಾಮಾಜಿಕ ಏಕೀಕರಣಕ್ಕೆ ಶ್ರಮಿಸಲು ಪಣ ತೊಡಲಾಯಿತು. ಶೃಂಗಸಭೆಯ ಕೊನೆಯಲ್ಲಿ ಕೋಪನ್ ಹ್ಯಾಗನ್ ಘೋಷಣೆಯನ್ನು ಅಳವಡಿಸಿಕೊಂಡು, ಹತ್ತು ಗುರಿಯನ್ನು ಸಾಧಿಸಲು ತೀರ್ಮಾನಿಸಲಾಯಿತು. ಐದು ವರ್ಷಗಳ ನಂತರ ಜೂನ್ 2000 ರಲ್ಲಿ ಜಿನೀವಾದಲ್ಲಿ ಎರಡನೇ ಶೃಂಗಸಭೆಯನ್ನು ಆಯೋಜಿಸಲಾಗಿತ್ತು.

8. ವಿಯೆನ್ನಾ ಘೋಷಣೆ ಮತ್ತು ಪ್ರೋಗ್ರಾಂ ಆಫ್ ಆಕ್ಷನ್ (Vienna Declaration and Programme of Action) ಯಾವುದಕ್ಕೆ ಸಂಬಂಧಿಸಿದೆ?

ಅ) ಮಾನವ ಹಕ್ಕುಗಳು

ಆ) ಬಾಲ ಕಾರ್ಮಿಕರ ನಿರ್ಮೂಲನೆ

ಇ) ಮಹಿಳೆಯರ ಕಳ್ಳ ಸಾಗಣಿಕೆ ತಡೆಯುವುದು

ಈ) ಮಕ್ಕಳ ಶಿಕ್ಷಣ

ಮಾನವ ಹಕ್ಕುಗಳು

ವಿಯೆನ್ನಾ ಘೋಷಣೆ ಮತ್ತು ಪ್ರೋಗ್ರಾಂ ಆಫ್ ಆಕ್ಷನ್ ಮಾನವ ಹಕ್ಕುಗಳಿಗೆ ಸಂಬಂಧಿಸಿದೆ. ಈ ಘೋಷಣೆಯನ್ನು 25ನೇ ಜೂನ್ 1993 ರಲ್ಲಿ ವಿಯೆನ್ನಾ, ಆಸ್ಟ್ರೀಯಾದಲ್ಲಿ ನಡೆದ ವಿಶ್ವ ಮಾನವ ಹಕ್ಕು ಸಮಾವೇಶದಲ್ಲಿ ಅಳವಡಿಸಿಕೊಳ್ಳಲಾಯಿತು. ಈ ಘೋಷಣೆಯಡಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈ ಕಮೀಷನರ್ ಸ್ಥಾಪಿಸಲಾಗಿದೆ.

9. ಆರೋಗ್ಯವಂತ ವ್ಯಕ್ತಿಯೊಬ್ಬನಿಗೆ ಪ್ರತಿ ದಿನಕ್ಕೆ__________ಕ್ಯಾಲೋರಿ ಅಗತ್ಯವಿದೆ?

ಅ) 1500-2000 ಕ್ಯಾಲೋರಿ

ಆ) 2000-3000 ಕ್ಯಾಲೋರಿ

www.karunaduexams.com

ಇ) 2500-3000 ಕ್ಯಾಲೋರಿ

ಈ) 4500-5000 ಕ್ಯಾಲೋರಿ

2500-3000 ಕ್ಯಾಲೋರಿ

10. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಅಭಿವೃದ್ಧಿಪಡಿಸಿದವರು ________?

ಅ) ಮಹಬೂಬ್ ಉಲ್ ಹಕ್ ಮತ್ತು ಅಮರ್ತ್ಯ ಸೇನ್

ಆ) ಮಹಮ್ಮದ್ ಯೂನಸ್ ಖಾನ್ ಮತ್ತು ಅಮರ್ತ್ಯ ಸೇನ್

ಇ) ಮಹಬೂಬ್ ಉಲ್ ಹಕ್ ಮತ್ತು ವೈ ವಿ ರೆಡ್ಡಿ

ಈ) ಪೀಟರ್ ಥಾಮ್ಸನ್ ಮತ್ತು ಡೇವಿಡ್ ಜಾಕೊಬ್

ಮಹಬೂಬ್ ಉಲ್ ಹಕ್ ಮತ್ತು ಅಮರ್ತ್ಯ ಸೇನ್

www.karunaduexams.com